ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಅಗು ನೀ ಅನಿಕೇತನ
BE BOUNDLESS
Central College Campus, Dr. AmbedkarVeedhi, Bengaluru,
E-mail ID: registrarevlubcu@gmail.com, Ph.No: 080-22295559

ಸಂಖ್ಯೆ:ಬೆಂ.ನ.ವಿ/ಪ.ವಿ/UUCMS/ಫಲಿತಾಂಶ/IISem/2022-23 | 2553 ದಿನಾಂಕ:21.03.2023

## ಸುತ್ತೋಲೆ

ವಿಷಯ: ಎರಡನೇ ಸೆಮಿಸ್ಟರ್ ಸ್ನಾತಕ ಕೋರ್ಸ್‌ಗಳ (NEP) ಫಲಿತಾಂಶ ಪ್ರಕಟಿಸಲಾಗಿದ್ದು, ಫಲಿತಾಂಶ ಪ್ರಕಟವಾಗದ ಕಾಲೇಜುಗಳ ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮದ ಬಗ್ಗೆ.

ವಿಷಯ: ಸ್ನಾತಕ ಕೋರ್ಸ್‌ಗಳ ಫಲಿತಾಂಶ ಪ್ರಕಟಣಾ ದಿನಾಂಕ:20.03.2023

******

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ ಕೋರ್ಸ್‌ಗಳ ಎರಡನೇ ಸೆಮಿಸ್ಟರುಗಳ (N.E.P) ಫಲಿತಾಂಶಗಳನ್ನು (UUCMS Portal) ನಲ್ಲಿ ದಿನಾಂಕ:20.03.2023 ರಂದು ಪ್ರಕಟಿಸಲಾಗಿದೆ ಯಾವ ಕಾಲೇಜುಗಳ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿಲ್ಲವೋ, ಆ ಕಾಲೇಜುಗಳ ಪ್ರಾಂಶುಪಾಲರು ಅಥವಾ ಸಿಬ್ಬಂದಿ ಸೂಕ್ತ ದಾಖಲೆಯ ಸಮೇತ ಪರೀಕ್ಷಾ ವಿಭಾಗಕ್ಕೆ ಬಂದು ಫಲಿತಾಂಶ ಪ್ರಕಟಿಸಲು ಬೇಕಾದ ದಾಖಲೆಗಳನ್ನು, ವಿದ್ಯಾರ್ಥಿಗಳ ಹಾಜರಾತಿ, ಆಂತರಿಕ ಅಂಕ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳು ಇತ್ಯಾದಿಗಳನ್ನು UUCMS ಪೋರ್ಟಲ್‌ನಲ್ಲಿ ದಾಖಲಿಸಿರುವ ಬಗ್ಗೆ ಪುರಾವೆಗಳನ್ನು ಒದಗಿಸಿ ಫಲಿತಾಂಶ ಪ್ರಕಟಣೆ ಮಾಡಿಸಿಕೊಳ್ಳತಕ್ಕದ್ದು. ಈ ಸಂಬಂದ ಸುತ್ತೋಲೆಗಳನ್ನು ಹೊರಡಿಸಿದ್ದು ಹಾಗೂ ದೂರವಾಣಿ ಮೂಲಕ ತಿಳಸಿದ್ದರೂ, ಕೆಲವು ಕಾಲೇಜುಗಳ ಪ್ರಾಂಶುಪಾಲರು ಸ್ಪಂದಿಸಿರುವುದಿಲ್ಲ. ಇತರೆ ವಿದ್ಯಾರ್ಥಿಗಳಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಫಲಿತಾಂಶ ಬಿಡುಗಡೆ ಮಾಡಲಾಗಿದೆ. ದಿನಾಂಕ:31.03.2023 ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಆಗಿರುವ ಅನಾನುಕೂಲವನ್ನು ಸರಿಪಡಿಸಿಕೊಳ್ಳಲು ತಿಳಸಲಾಗಿದೆ. ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ವಿದ್ಯಾರ್ಥಿಗಳನ್ನು, ಪೋಷಕರನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಬಾರದೆಂದು ಈ ಮೂಲಕ ತಿಳಸಲಾಗಿದೆ.

ಈ ಮೇಲ್ಕಂಡ ಕೆಲಸವನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ಮಾಡದೇ ಫಲಿತಾಂಶ ಪ್ರಕಟಣೆಯಾಗದಿದ್ದರೆ, ಅವರೇ ಹೊಣೆಗಾರರಾಗುತ್ತಾರೆ. ಮುಂದುವರೆದು, ದಿನಾಂಕ:31.03.2023 ರ ನಂತರ ಬರುವ ಕಾಲೇಜುಗಳಗೆ, ಪ್ರತಿ ದಿನಕ್ಕೆ ಸೂಕ್ತ ದಂಡ ಶುಲ್ಕ ವಿಧಿಸಲಾಗುವುದೆಂದು ಈ ಮೂಲಕ ತಿಳಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)
ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಗೆ,

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಂಶುಪಾಲರುಗಳು.

**ಪ್ರತಿ:** ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಯವರ ಆಪ್ತ ಶಾಖೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.